ವ್ಯಾಪಾರಿ: ಯಜಮಾನರೇ ಹಳೇ ರದ್ದಿ ಕಾಗದಗಳು ಇದ್ದರೆ ಕೊಡಿ.
ಗುಂಡ: ಇಲ್ಲಾಪ್ಪ! ಆ ತರಹ ಕಾಗದ ಯಾವುದೂ ಇಲ್ಲ.
ವ್ಯಾಪಾರಿ: ಇಲ್ಲ ಅನ್ನಬೇಡಿ ಯಜಮಾನರೇ! ನೀವು ಖ್ಯಾತ ಸಾಹಿತಿಗಳು ಅಂತ ನನಗೆ ಗೊತ್ತು.

★★★

ಗುಂಡ: ಸಾರ್ 'ಗಂಡನೇ ಮನೆಯ ಯಜಮಾನ' ಅನ್ನುವ ಪುಸ್ತಕ ಇದೆಯಾ?
ಅಂಗಡಿಯಾತ: ಸಾರ್! ಅದೊಂದು ಕಾಲ್ಪನಿಕ ಹಾಸ್ಯ ಕಾದಂಬರಿ. ಈ ರಸ್ತೆಯ ಮೂಲೆಯಲ್ಲಿರೋ ಅಂಗಡಿಯಲ್ಲಿ ಸಿಗುತ್ತದೆ ನೋಡಿ.

★★★

ಯಜಮಾನ: ಏನೋ ಗುಂಡಾ ನಿಮ್ಮ ಮಗು ಮುದ್ದಾಗಿದೆ. ನೀವಿಬ್ಬರು ಕಪ್ಪಗಿದ್ದರೂ ಮಗು ಮಾತ್ರಾ ಬೆಳ್ಳಗಿದೆ.
ಗುಂಡ: ಎಲ್ಲಾ ನಿಮ್ಮ ಕೃಪೆ ರಾಯರೇ.

★★★

ಪ್ರೇಮಿ: ನಿಜ ಹೇಳಬೇಕೂಂದ್ರೆ ನನಗೆ ಚೆನ್ನಾಗಿ ಅಡುಗೆ ಮಾಡುವ, ಸರಳತೆಯಿಂದ ಕೂಡಿರುವ, ವಿಧೇಯಳಾಗಿರುವ ಹಾಗೂ ಮನೆಯನ್ನು ಅಚ್ಚುಕಟ್ಟಾಗಿ ಇಟ್ಟುಕೊಳ್ಳುವಂತಹ ಹುಡುಗಿ ಬೇಕು.
ಪ್ರೇಯಸಿ: ನಮ್ಮ ಮನೆಗೆ ಬನ್ನಿ! ನಮ್ಮ ಮನೆಯ ಕೆಲಸದವಳು ಇದಾಳೆ.

**(ಸಂಗ್ರಹ) ಎಂ.ಕೆ. ಮಂಜುನಾಥ್, ಬೆಂಗಳೂರು**




ಸಂದರ್ಶಕ: ರೆಸ್ಯೂಮ್‌ನಲ್ಲಿ ಈಜುಬರುತ್ತದೆ ಅನ್ನುವುದನ್ನು ನಿನ್ನ ಕೌಶಲವೆಂದು ನಮೂದಿಸಿರುವೆಯಲ್ಲಾ?
ನೀರಜ್: ಹೂಂ ಮತ್ತೆ. ಬೆಂಗಳೂರಿನಲ್ಲಿ ಮಳೆ ಬಂದಾಗಲೂ ನಾನು ಆಫೀಸಿಗೆ ಹಾಜರಾಗ ಬಲ್ಲೆ.
ಸಂದರ್ಶಕ: ನೀನು ಇಂಟರ್‌ವ್ಯೂನಲ್ಲಿ ಸೆಲೆಕ್ಟ್ ಆಗಿದ್ದಿ. ನಾಳೆಯೇ ಕೆಲಸಕ್ಕೆ ಹಾಜರಾಗು.



★★★

ಒಂದು ಅಂಗಡಿಯಲ್ಲಿ ಆಫರ್ ಹೀಗಿತ್ತು. 1000 ರೂ. ಗೆ. ಏನೇ ತಗೊಂಡ್ರು ಒಂದು ವಾಚ್ ಫ್ರೀ.
ಮರುದಿನ ಅಂಗಡಿಯಲ್ಲಿ ಗಲಾಟೆ. ಪೊಲೀಸರು ಬಂದರು
ಪೊಲೀಸು: ಏನು ಗಲಾಟೆ, ಯಾಕೆ?
ಅಂಗಡಿಯವ: ನೋಡಿ ಸರ್, ಈ ನಂಜ 1000ರೂ.ಗೆ ಚಿಲ್ಲರೆ ತಗೊಂಡು ವಾಚ್ ಫ್ರೀ ಕೇಳ್ತಾನೆ!'

**(ಸಂಗ್ರಹ) ವಿ.ಹೇಮಂತ ಕುಮಾರ, ಬೆಂಗಳೂರು**

ಅದೊಂದು ದೊಡ್ಡ ಕಚೇರಿ. ಅಲ್ಲಿಯ ಮೈನ್ ಕಂಪ್ಯೂಟರ್ ಹಾಳಾಯಿತು. ಮುಖ್ಯ ಅಧಿಕಾರಿಗಳು ಹೈಪವರ್ಡ್ ಕಂಪ್ಯೂಟರ್ ಕನ್ಸಲ್‌ಟೆಂಟನನ್ನು ಕರೆಸಿದರು. ಅವನು ಬಂದ; ಕಂಪ್ಯೂಟರ್‌ಗೆ ಸಂಬಂಧಿಸಿದ ಎಲ್ಲಾ ಭಾಗಗಳನ್ನು ಮತ್ತು ವೈರ್ ಕನೆಕ್ಷನ್ಸ್‌ಗಳನ್ನು ಸಂಪೂರ್ಣವಾಗಿ ಪರೀಕ್ಷಿಸಿದ. ನಂತರ ತನ್ನ ಕಿಟ್‌ನಿಂದ ಒಂದು ಚಿಕ್ಕ ಸುತ್ತಿಗೆಯನ್ನು ಹೊರತೆಗೆದು ಕಂಪ್ಯೂಟರ್ ಹಿಂಭಾಗಕ್ಕೆ ಹೊಡೆದ. ಕಂಪ್ಯೂಟರ್ ತನ್ನ ಕೆಲಸ ಮಾಡಲಾರಂಬಿಸಿತು.
'ನಾಲ್ಕು ದಿನಗಳ ನಂತರ ಕಚೇರಿಗೆ ಕಂಪ್ಯೂಟರ್ ರಿಪೇರಿ ಮಾಡಿದ್ದಕ್ಕೆ ಸಂಬಂಧಿಸಿದವರಿಂದ ಬಿಲ್ ಬಂತು. ಬಿಲ್‌ನಲ್ಲಿ ರೂ.2200 ನಮೂದಾಗಿತ್ತು. ಅಧಿಕಾರಿ ರೇಗಿ ಸಂಬಂಧಿಸಿದವರಿಗೆ ಫೋನಾಯಿಸಿದರು. 'ಕಂಪ್ಯೂಟರ್ ರಿಪೇರಿಗೆ 2200 ರೂಪಾಯಿಗಳ ಬಿಲ್ ಮಾಡಿದ್ದೀರಲ್ಲ. ಯಾಕೆ? ರಿಪೇರಿಗೆ ಬಂದವನು ಎಂಟು ನಿಮಿಷ ಮಾತ್ರ ವ್ಯಯ ಮಾಡಿದ. ಅವನು ಹಾಕಿದ ವಸ್ತುಗಳು ಮತ್ತು ರಿಪೇರಿ ಚಾರ್ಜಿಗೆ ಸೂಕ್ತ ಬಿಲ್ ಬೇಕು.'
ಮರುದಿನವೇ ಸಂಬಂಧಿಸಿದವರಿಂದ ಬಿಲ್ ಬಂತು. ಬಿಲ್‌ನಲ್ಲಿ ಹೀಗೆ ಲೆಕ್ಕ ಹಾಕಲಾಗಿತ್ತು– ಕಂಪ್ಯೂಟರ್ ಹಿಂಭಾಗಕ್ಕೆ ಹೊಡೆದ ಬಾಬ್ತು: 200ರೂ.
ಯಾವ ಭಾಗಕ್ಕೆ ಹೊಡೆಯಬೇಕೆಂದು ನಿರ್ಧರಿಸಿದ್ದಕ್ಕೆ: 2000ರೂ.
ಒಟ್ಟು: 2200–00 ರೂ.ಗಳು

★★★

ವಿಧಾನ ಸಭೆಯ ಚುನಾವಣೆಯ ಕಾಲ. ಒಬ್ಬ ಉಮೇದುವಾರ ತನ್ನ ಹಿಂಬಾಲಕರೊಂದಿಗೆ ಮನೆ– ಮನೆಗೆ ಹೋಗಿ ಓಟನ್ನು ಯಾಚಿಸುತ್ತಿದ್ದ. ಒಂದು ಮನೆಗೆ ಹೋಗಿ ಉಮೇದುವಾರ ಕಾಲಿಂಗ್ ಬೆಲ್ ಒತ್ತಿದ. ಬಾಗಿಲು ತೆರೆದು ಸುಮಾರು ಎಂಟು ವರ್ಷದ ಬಾಲಕನೊಬ್ಬ ಎದುರಾದ.
ನಿಮ್ಮ ತಂದೆ ಕಾಂಗ್ರೆಸಿನಲ್ಲಿದ್ದಾರೋ, ಬಿಜೆಪಿಯಲ್ಲಿದ್ದಾರೋ? ಉಮೇದುವಾರ ಪ್ರಶ್ನಿಸಿದ.
ಬಾತ್ ರೂಮಿನಲ್ಲಿದ್ದಾರೆ!' ಮುಗ್ಧ ಬಾಲಕ ಉತ್ತರಿಸಿದ.

**(ಸಂಗ್ರಹ) ಡಿ.ಎನ್. ಶ್ರೀನಾಥ್, ಶಿವಮೊಗ್ಗ**